# ಲಲ್ಲಾವಾಖ್

ಬಯಸಲಿಲ್ಲ ಯಾವುದನೂ, ನಂಬಲಿಲ್ಲ ಏನನೂ/ ನನ್ನ 'ವಾಖ್' ತಂದೀಯಿತು ನಾನು ಕುಡಿವ ಮಧುವನು/ 'ವಾಖಿ'ನ ತಾಕತ್ತಿನಿಂದ ಒಳಗತ್ತಲೆ ಹಿಡಿದುಕೊಂಡೆ/ ಸುರಳಿ ಸುತ್ತಿ ಬಡಿದು ನೆಲದ ಮೇಲೆ ಅದನ್ನು ಚಿಂದಿ ಮಾಡಿದೆ.

(ಲಲ್ಲೇಶ್ವರಿ: ಸಂಧ್ಯಾ ಎಸ್.)

ಇದು ಕಾಶ್ಮೀರದ ಮೊದಲ ಆಧುನಿಕ ಕವಿ ಎಂದು ಕರೆಸಿಕೊಂಡ ಲಲ್ಲೇಶ್ವರಿಯ ಒಂದು ವಾಖ್. 'ವಾಖ್' ಎಂಬ ಪದವೇ ತಿಳಿಸುವಂತೆ ಲಲ್ಲೇಶ್ವರಿಯ ಬಾಯಿಂದ ಹೊರಬಂದ ಕಾವ್ಯ ರೂಪದ ಮಾತುಗಳು. ಕಾವ್ಯದ ರೂಪವೆಂದು ಭಾವಿಸಿ ಆಕೆ ಆಡಿದ ಮಾತಲ್ಲವಾದರೂ ಕೇಳುಗರ ಮನಸ್ಸನ್ನು ಮೀಟಿ ಅವರ ಅಂತರಾಳದೊಂದಿಗೆ ಸಂಬಂಧವನ್ನು ಕಂಡುಕೊಳ್ಳುವ ಅಧ್ಯಾತ್ಮ ಕಾವ್ಯ ಎನಿಸಿಕೊಂಡಿದೆ. ಆಧುನಿಕ ಕಾಶ್ಮೀರಿ ಭಾಷೆಯ ತಾಯಿ ಎಂದೇ ಕರೆಸಿಕೊಳ್ಳುವ ಆಕೆಯ ವಾಖ್‌ಗಳನ್ನು 'ಲಲ್ಲಾವಾಖ್'ಗಳೆಂದು ಕರೆಯಲಾಗುತ್ತದೆ.

ಲಲ್ಲಾಖಾಖ್‌ಗಳು ನಾಲ್ಕು ಸಾಲಿನ ಪದ್ಯಗಳಾಗಿದ್ದು ಹಾಡಲಿಕ್ಕೆಂದೇ ಬರೆದವಲ್ಲ. ಆದರೆ ಹಾಡಿನಂತೆ ಹಾಡಲು ಬರುವಂಥವು ಹಳ್ಳಿಯ ಹಾಡುಗಾರರು ತಮಗೆ ತೋರಿದಂತೆ ರಾಗ ಹಾಕಿ ಹಾಡಿಕೊಂಡರೆ ಕಾಶ್ಮೀರಿ ಶಾಸ್ತ್ರೀಯ ಸಂಗೀತಗಳಲ್ಲಿ ಸೂಫಿಯಾ ಭಕ್ತರ ಸಭೆಗಳಲ್ಲಿ ಲಲ್ಲಾವಾಖ್‌ಗಳನ್ನು ಹಾಡಲಾಗುತ್ತದೆ. ಸಂಸ್ಕೃತವನ್ನು ಬಲ್ಲವಳಾದರೂ ತನ್ನ ಸಂವೇದನೆಗಳ ಅಭಿವ್ಯಕ್ತಿಗೆ ಅವಳು ಬಳಸಿಕೊಂಡಿದ್ದು ಜನಭಾಷೆಯಾದ ಕಾಶ್ಮೀರಿಯನ್ನು ನಮ್ಮ ಅಕ್ಕಮಹಾದೇವಿಯ ಹಲವು ವಚನಗಳಿಗೆ ಅವಳ ವಾಖ್‌ಗಳನ್ನು ಹೋಲಿಸಲು ಬಳಸಿಕೊಳ್ಳಬಹುದು.

ಹಿಂದಿನಿಂದಲೂ ಕಾಶ್ಮೀರ ಆಧ್ಯಾತ್ಮಿಕ ಹಾಗೂ ದಾರ್ಶನಿಕ ಪರಂಪರೆಗಳ ನಾಡಾಗಿತ್ತು. ಆನಂತರ ಸೌಂದರ್ಯಶಾಸ್ತ್ರವೂ ಈ ವಿಚಾರಗಳೊಂದಿಗೆ ಸೇರಿಕೊಂಡಿತು. ಅಭಿನವಗುಪ್ತ, ಆನಂದವರ್ಧನ, ಕ್ಷೇಮೇಂದ್ರ, ಕಲ್ಹಣ, ಉತ್ಪಲಗುಪ್ತಾಚಾರ್ಯ ಮುಂತಾದ ವೈಯ್ಯಾಕರಣಿಗಳು– ಕಾವ್ಯಮೀಮಾಂಸಕರು, ಕವಿಗಳು ಹುಟ್ಟಿದ ಶ್ರೀಮಂತ ಭಾಷೆ ಕಾಶ್ಮೀರಿ. ಇಂತಹ ಶ್ರೀಮಂತವಾದ ಪರಂಪರೆಯ ನಡುವೆ ಅರಳಿದ ಹೂ ಈಕೆಯಾಗಿದ್ದಳು.

ಕಾಶ್ಮೀರಕ್ಕೂ, ಕನ್ನಡಕ್ಕೂ ಹಲವು ರೀತಿಯ ಸಂಬಂಧಗಳಿವೆ ಭಾರತದ ಸ್ವರ್ಗ, ಭೂಶಿರ ಎಂದೇ ಕರೆಸಿಕೊಳ್ಳುವ ಕಾಶ್ಮೀರವೆಂದರೆ ದಾಲ್‌ಲೇಖ್‌ನ ಬೋಟುಮನೆಗಳು, ಬೀಳುವ ಹಿಮ ಅಲ್ಲಿನ ಆಹಾರದ ವೈವಿಧ್ಯತೆ ಹೊಟ್ಟೆಯ ಮೇಲೆ ಕಾಂಗಡಾ (ಕೆಂಡದ ಬುಟ್ಟಿ) ಹೊತ್ತು ನಡೆಯುವ ದಿನನಿತ್ಯದ ಬದುಕು ಎದುರಾಗುತ್ತದೆ. ವಚನ ಸಾಹಿತ್ಯದಲ್ಲಿ ಬರುವ ಬೊಂತಾದೇವಿ, ಮೋಳಿಗೆ ಮಾರಯ್ಯ ಮತ್ತು ಅವನ ಮಡದಿ ಮಹಾದೇವಿ ಕಾಶ್ಮೀರಕ್ಕೆ ಸೇರಿದವರು.

ಸಂಪ್ರದಾಯಸ್ಥ ಶೈವ ಬ್ರಾಹ್ಮಣ ಚಂದ್ರಭಟ್ಟನ ಮಗಳಾದ ಈಕೆ ಬಾಲ್ಯದಿಂದಲೇ ಶೈವ ಸಿದ್ಧಾಂತಗಳ ಸಂಪರ್ಕಕ್ಕೆ ಬಂದಿದ್ದವಳು. ಅಕ್ಕಮಹಾದೇವಿಯ ಹಾಗೆ ಲಲ್ಲಾನ ಇಷ್ಟ ದೈವವೂ ಶಿವನೇ ಆಗಿದ್ದ. ಏಳನೇ ವಯಸ್ಸಿನಲ್ಲಿ ಸಿದ್ಧ ಶ್ರೀಕಂಠನಿಂದ ಯೋಗಸಾಧನೆ ದೀಕ್ಷೆ ಪಡೆದುಕೊಡ ವಿವರಗಳು ಸಿಕ್ಕುತ್ತವೆ. ಬಹಳಷ್ಟು ಅವಳ ವಾಖ್‌ಗಳಲ್ಲಿ ಸಿದ್ಧ ಶ್ರೀಕಂಠನ ಪ್ರಸ್ತಾಪ ಬರುತ್ತದೆ. ಹತ್ತು ವರ್ಷಕ್ಕೆ ಸೋಮಭಟ್ಟನೊಂದಿಗೆ ವಿವಾಹವಾದ ಅವಳಿಗೆ ಅತ್ತೆಯ ಕಾಟ ತಪ್ಪುವುದಿಲ್ಲ ಗಂಡನ ಮನೆಯ ಹೆಸರು ಪದ್ಮಾವತಿ ಶಿವನ ಪ್ರೇಮದಲ್ಲಿ ಉನ್ಮತ್ತಳಾದ ಅವಳು ಲೌಕಿಕ ಬಂಧನಗಳನ್ನು ಕಳಚಿ ಹೊರಬರುತ್ತಾಳೆ. ಕುಲಗುರುವಾದ ಸಿದ್ಧಶ್ರೀಕಂಠ, ಸಯದ್ ಜಲಾಲುದ್ದೀನ್ ಬುಖಾರಿ, ಹಜರತ್ ಸಯದ್ ಹುಸೇನ್ ಸಮನಾಗಿ ಇವರೆಲ್ಲ ಅವಳಿಗೆ ದೀಕ್ಷೆ ನೀಡಿದ್ದಲ್ಲದೆ ಅಧ್ಯಾತ್ಮದ ಬಾಗಿಲು ತೆರೆಯುತ್ತಾರೆ. ಪವಾಡಗಳನ್ನುಮೆರೆಯುವಾಗ ಬಂದ ವಾಖ್‌ಗಳು ಲಲ್ಲಾವಾಖ್‌ಗಳಾಗಿದ್ದು ಅವು ಶಿವನನ್ನು ಕುರಿತಂತೆ ಪ್ರೇಮ, ಅನುಭಾವ ಲೋಕವನ್ನು ತೆರೆದಿಡುತ್ತವೆ.

ಹಿಬ್ರೂಗಳ ನಬೀಗಳಂತೆ, ಮುಸ್ಲಿಮರು ದರ್ವೇಶಿಗಳಂತೆ ಉನ್ಮತ್ತಳಾಗಿ ನಗ್ನಳಾಗಿ ಅಲೆಮಾರಿಯಾಗಿ ಶಿವನ ಅನುಭಾವ ಲೋಕದಲ್ಲಿ ಸಂಚರಿಸಿದವಳು. ಲಲ್ಲೇಶ್ವರಿ ಹಿಂದೂ ಮತ್ತು ಮುಸ್ಲಿಂ ಎರಡೂ ಸಂಸ್ಕೃತಿಯಲ್ಲೂ ಉಲ್ಲೇಖಿಸಿರುವ ಲಲ್ಲಾಳನ್ನು ಎರಡನೆಯ ರಾಬಿಯಾ ಬಸ್ರಿ ಎಂದು ಕರೆಯುವುದುಂಟು. ಲಲ್ಲಾ, ಲಲ್‌ಡೆಡ್, ಅಲ್ಲೇಶ್ವರಿ, ಲಲ್ಲಯೋಗೀಶ್ವರಿ, ಲಲ್ಲಾಮೋಚ್, ಲಲ್ಲಮಟ್ಸ್, ಲಲ್ಲ ಆರೀಫಾ ಇವು ಅವಳಿಗಿರುವ ಬೇರೆ ಬೇರೆ ಹೆಸರುಗಳು ಲಲ್ ಎಂದರೆ ಕಿಬ್ಬೊಟ್ಟೆ ಎಂಬ ಅರ್ಥವಿದ್ದು ಅವಳ ಕಿಬ್ಬೊಟ್ಟೆ ಜೋತು ಮರ್ಮಾಂಗದ ಮೇಲೆ ನೇತಾಡುತ್ತಿದ್ದುದರಿಂದ ಈ ಹೆಸರು ಬಂದಿರಬಹುದುದೆಂಬ ಊಹೆಗಳೂ ಇವೆ.

ಯೋಗಿಗಳು ದಾರ್ಶನಿಕರು ಸಾಧಕರ ಸುತ್ತ ಚಿತ್ರ ವಿಚಿತ್ರ ರೀತಿಯ ಪವಾಡಗಳು ಹುಟ್ಟಿಕೊಳ್ಳುತ್ತವೆ ಹಾಗೂ ಹರಡಿಕೊಳ್ಳುತ್ತವೆ. ಅದಕ್ಕೆ ಲಲ್ಲೇಶ್ವರಿಯೂ ಹೊರತಾಗಿಲ್ಲ. ಒಮ್ಮೆ ಪೂಜಾನಿರತನಾದ ಸಿದ್ಧ ಶ್ರೀಕಂಠನನ್ನು ಭೇಟಿಯಾಗಿ ತಾನು ಯಾರು ಇಲ್ಲದ ಕಡೆ ಬಹಿರ್ದೆಸೆಗೆ ಹೋಗಬೇಕು ಎನ್ನುತ್ತಾಳೆ. ಆ ಸಿದ್ಧ ಅವಳನ್ನು ನಿರ್ಜನ ಜಾಗಕ್ಕೆ ಕರೆದುಕೊಂಡು ಹೋದಾಗ ಅವಳು ತಾನು ಕೂತಲ್ಲೆಲ್ಲ ನೆಲ ಕೆರೆದು ದೇವರ ಮೂರ್ತಿಗಳನ್ನು ತೋರಿಸುತ್ತಾಳೆ. ಕಾಶ್ಮೀರದ ಸಂತ ಶೇಖ್ ನೂರುದ್ದೀನ್ ವಲೀ ಹುಟ್ಟಿದಾಗ ತಾಯಿ ಎದೆಹಾಲನ್ನು ಕುಡಿಯಲು ಬಾರದ ಶಿಶುವಾಗಿದ್ದ ಆಗ ಒಳಬಂದ ಲಲ್ಲಿ 'ಇಲ್ಲಿ ಹುಟ್ಟಿ ಬರುವಾಗ ನಿನಗೆ ನಾಚಿಕೆಯಾಗಲಿಲ್ಲ. ತಾಯಿ ಹಾಲು ಕುಡಿಯಲು ನಾಚಿಕೆಯೇ' ಎಂದು ತಾನೇ ಮೊಲೆಯುಡಿಸಿದಳು ಎಂಬ ಕತೆಯನ್ನು ಹೇಳಲಾಗುತ್ತದೆ. ಮುಂದೆ ನೂರುದ್ದೀನ್ ತನ್ನ ಶ್ರುಕ್ ಒಂದರಲ್ಲಿ 'ಪದುಮ ಪುರದವಳು ಲಲ್ಲೆ ಯೋಗಿನಿ ತಾಯಿ/ ಪರಮ ಸುಧೆ ಮೊಗೆದು ಕುಡಿದು/ ಸಲುಹಿದಳು ಸಂತರ ತನ್ನ ತೊಡೆ ಮೇಲೆ/ ಪ್ರಭು ಯೋಗಿನಿ ತಾಯಿ/ ಪರಮ ಸುಧೆ ಮೊಗೆದು ಕುಡಿದು/ ಸಲುಹಿದಳು ಸಂತರ ತನ್ನ ತೊಡೆ ಮೇಲೆ/ ಪ್ರಭು ಕೊಡೊ ನನಗಾ ಕೃಪೆಯ' ಇಂತಹ ಹಲವು ವಿವರಗಳು ಲಲ್ಲೇಶ್ವರಿ ಕುರಿತ ಎಸ್. ಸಂಧ್ಯಾ ಅವರ ಕೃತಿಯಲ್ಲಿ ಲಭ್ಯವಿದೆ.

■ **ಅಮೃತಮತಿ**

## ಮಾತೇ ಮುತ್ತು

- ಹಸಿದವನಿಗೆ ಊಟ ಕೊಡುವುದು ಉಪಕಾರವಲ್ಲ, ಅದು ಕರ್ತವ್ಯ. ಮಾನವೀಯತೆಯ ಶಾಸನವಿದು.

  –ಕೃಷ್ಣಮೂರ್ತಿ ಪುರಾಣಿಕ

- ಪರರ ಏಳಿಗೆಯ ಬಗ್ಗೆ ನಾವು ಹೊಟ್ಟೆಕಚ್ಚುಪಡುವುದು ಮಹಾ ಅಪರಾಧವೇ ಸರಿ.

  –ಜಾನ್ ರಸ್ಕಿನ್

- ಗರ್ವವನ್ನು ತ್ಯಜಿಸುವವನು ಇತರರ ಪ್ರೀತಿಗೆ ಪಾತ್ರನಾಗುತ್ತಾನೆ.

  –ಮಹಾಭಾರತ

- ಅನುಭವಕ್ಕೆ ಬರದ ಹೊರತು ಯಾವುದೂ ನಿಜವಾಗುವುದಿಲ್ಲ. ನಿಮ್ಮ ಜೀವನ ಅದಕ್ಕೆ ಉದಾಹರಣೆಯಾಗದ ಹೊರತು ಗಾದೆ ಮಾತು ಕೂಡ ನಿಜವಾದ ಮಾತಾಗದು.

  –ಜಾನ್ ಕೀಟ್ಸ್

- ಒಬ್ಬ, ಆತನ ಸ್ನೇಹಿತರು ಹೊಗಳಿ ಹಾಡುವಷ್ಟು ಒಳ್ಳೆಯವನೂ ಇರುವುದಿಲ್ಲ. ಅವನಿಗಾಗದವರು ತೆಗಳಿ ತಿರಸ್ಕರಿಸುವಷ್ಟು ಕೆಟ್ಟವನೂ ಇರುವುದಿಲ್ಲ.

  –ಮಾಸ್ತಿ ವೆಂಕಟೇಶ ಅಯ್ಯಂಗಾರ್

- ಅಧಿಕಾರ ನಾಗರಹಾವಿನ ಹೆಡೆ ಇದ್ದಂತೆ. ಅದು ಬರಲಿ ಎಂದು ಬಯಸಬಾರದು. ಬಂದಾಗ ಹೆದರಿ ಸ್ವೀಕಾರ ಮಾಡಬೇಕು.

  –ತರಾಸು

- ಹಿಂಸೆಯ ಆಶ್ರಯ ಪಡೆದ ಬಳಿಕ ಬಲಿಷ್ಠನೂ ಸದಾ ಭಯ ಪೀಡಿತನಾಗುತ್ತಾನೆ. ಅಹಿಂಸೆಗೆ ಭಯವೆಂಬ ಶಬ್ದವೇ ಗೊತ್ತಿರುವುದಿಲ್ಲ.

  –ಮಹಾತ್ಮ ಗಾಂಧಿ

- ಜೀವನವೆನ್ನುವುದು ಒಂದು ದ್ವೀಪವಿದ್ದಂತೆ; ಆಸೆಗಳು ಅದರಲ್ಲಿ ಕಾಣುವ ಕಲ್ಲು ಬಂಡೆಗಳು, ಕನಸುಗಳು ಅದರ ಮರಗಳು.

  –ಖಲೀಲ್ ಗಿಬ್ರಾನ್